**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 5429/2021** **ದಿನಾಂಕಃ 13.11.2025**

**ಸಿ ಡಬ್ಲೂ : 6**

**ಪಿ ಡಬ್ಲೂ : 3**

--------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಸಂಜಯ ತಾತೋಬ ಸಿಂದೆ . |
| ಗಂಡ/ ತಂದೆಯ ಹೆಸರು | ತಾತೋಬಾ |
| ವಯಸ್ಸು | 37 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಸಾಃ ಕೋತನಟ್ಟಿ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 7 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇಲ್ಲ. ಸಾಕ್ಷಿಗೆ ವಾಹನ ತಡೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲಿಲರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ನಿಪಿ 4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲಿಸರು ಯಾವುದೇ ವಾಹನವನ್ನು ಪಂಚನಾಮೆ ಮಾಡಿಲ್ಲ. ಸಾಕ್ಷಿಗೆ ಛಾಯಾಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಛಾಯಾ ಚಿತ್ರದಲ್ಲಿ ತಾನು ಇರುವುದಾಗಿ ಒಪ್ಪಿ ಕೊಂಡಿದ್ದರಿಂದ ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಸದರಿ ಛಾಯಾ ಚಿತ್ರವನ್ನು ಯಾವಾಗ ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ - ಮಾನ್ಯ ಸಹಾಯಕ  ಸರ್ಕಾರಿ ಅಭಿಯೋಜಕರಿಂದಃ**

ದಿಃ 08.06.2021 ರಂದು ಮಧ್ಯಾಹ್ನ 4.00 ರ ಸಮಯದಲ್ಲಿ ನನ್ನನ್ನು ಚಾಸಾ 7 ರವರನ್ನು ಐಗಳಿ ಪೊಲೀಸ ಠಾಣೆಯ ಎ ಎಸ್ ಐ ರವರು ಹೀರೊ ಹೊಂಡಾ ಸಿಡಿ ಡಿಲಕ್ಸ ಮೋಟಾರ ಸೈಕಲ ಸಂಖ್ಯೆ ಕೆ ಎ 23 ಇ ಎ 8598 ನ್ನು ಹಾಗೂ ನಂಬರ ಪ್ಲೇಟ ಇಲ್ಲದ ಕೇಸರಿ ಬಣ್ಣದ ಟ್ರೇಲರ ಚೆಸ್ಸಿ ನಂಬರ ಪಿ ಎಮ್-176/2004 ನ್ನು ವಾಹನ ತಡೆ ಪಂಚನಾಮೆ ಮಾಡುವುದು ಇದೆ ಎಂದು ಹೇಳಿ ನಮ್ಮನ್ನು ಪಂಚರಾಗಲು ಕೇಳಿಕೊಂಡರು ಅದಕ್ಕೆ ನಾವು ಒಪ್ಪಿ ಕೊಂಡೆವು ಎಂದರೆ ಸರಿಯಲ್ಲ. ನಂತರ ಸದರಿ ವಾಹನಗಳನ್ನು  ನಮ್ಮ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಹಾಗೂ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಿಪಿ 4 ರಲ್ಲಿ ಇರುವ ಅಂಶಗಳನ್ನು ನಮಗೆ ಓದಿ ಹೇಳಿರುತ್ತಾರೆ ಹಾಗೂ ನಾವು ಅವುಗಳನ್ನು ತಿಳಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಿಪಿ 5 ರಂತೆ ನಮ್ಮ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ನಿಪಿ 4 ಹಾಗೂ 5 ರ ಸಂಗತಿಗಳು ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ .  ಕೆ ಎ ವಿ ಹಾಗೂ ಎಮ್ ಎಸ್  ಎಸ್   ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.